
# ಪುಸ್ತಕಲೋಕ

(ಕೊಲ್ಕತಾದ 'ಅದ್ವೈತ ಆಶ್ರಮ' ಮತ್ತು 'ರಾಮಕೃಷ್ಣ ಮಿಷನ್ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್' ಇತ್ತೀಚೆಗೆ ಹೊರತಂದಿರುವ ಮಹತ್ವದ ಪುಸ್ತಕಗಳ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ಮಾಡಿ ಕೊಡಲಾಗಿದೆ.)

## UNDERSTANDING CONSCIOUSNESS- RECENT ADVANCES




**ಪ್ರಕಾಶಕರು:** ರಾಮಕೃಷ್ಣ ಮಿಷನ್ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್
**ಪುಟ:** ೪೬೯; **ಬೆಲೆ:** ರೂ.೧೭೫/-

೨೦೦೮ರ ಜನವರಿ ೧೮ ರಿಂದ ೨೦ರವರೆಗೆ ಕೊಲ್ಕತಾದ ರಾಮಕೃಷ್ಣ ಮಿಷನ್ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್ ಸಂಸ್ಥೆಯಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ ಮಂಡಿಸಿದ ಪ್ರಬಂಧಗಳ ಸಂಕಲನವಿದು.

ಪ್ರಜ್ಞೆಯ ಅನ್ವೇಷಣೆಯನ್ನು ೩ ವಿಧಗಳಲ್ಲಿ ಮಾಡುವುದು ಸಾಧ್ಯ: ೧. ತತ್ತ್ವಜ್ಞಾನಿಗಳು ಅನುಸರಿಸುವ ತಾರ್ಕಿಕ ಮಾರ್ಗ; ೨. ವಿಜ್ಞಾನಿಗಳು ಅನುಸರಿಸುವ ಪ್ರಾಯೋಗಿಕ ಮಾರ್ಗ; ೩. ಅನುಭಾವಿಗಳು ಅನುಸರಿಸುವ ಸ್ವಾನುಭವದ ಮಾರ್ಗ. ಈ ಮೂರೂ ವರ್ಗಕ್ಕೆ ಸೇರಿದ ತಜ್ಞರು ಮಂಡಿಸಿದ ಬರಹಗಳನ್ನು ಈ ಪುಸ್ತಕವು ಒಳಗೊಂಡಿದೆ.


ಹೆಚ್ಚಿನ ಜೀವವಿಜ್ಞಾನಿಗಳು ಪ್ರಜ್ಞೆಯನ್ನು, ಮಿದುಳಿನಲ್ಲಿ ನಡೆಯುವ ಒಂದು ಪ್ರಕ್ರಿಯೆಯೆಂದು ಪರಿಭಾವಿಸಿ, ಮಿದುಳಿನ ವ್ಯವಸ್ಥೆಯನ್ನು ಅಧ್ಯಯನ ಮಾಡುವುದರ ಮೂಲಕ ಪ್ರಜ್ಞೆಯ ಗುಣಲಕ್ಷಣಗಳನ್ನು ಅರಿಯಬಹುದು ಎನ್ನುತ್ತಾರೆ. ಪ್ರಜ್ಞೆಯ ವಿವಿಧ ಹಂತಗಳು ಮತ್ತು ಮನಸ್ಸಿನ ಹಂತಗಳ ನಡುವೆ ಸಂಬಂಧವಿರುವುದರಿಂದ, ಅವುಗಳಿಗೆ ಕಾರಣವಾದ ನ್ಯೂರಾನುಗಳ ವಿದ್ಯುತ್-ಸಂಬಂಧಿತ ಕ್ರಿಯೆಗಳ ಅಧ್ಯಯನವನ್ನು ಕೆಲವು ವಿಜ್ಞಾನಿಗಳು ಮಾಡುತ್ತಾರೆ. ಜೀವಕೋಶಗಳ ಕಾರ್ಯಗಳಿಗೆ ಕಾರಣವಾದ ಜೀನ್‌ಗಳು ಮತ್ತು ಅವುಗಳನ್ನು ಹೊಂದಿರುವ ಡಿ.ಎನ್.ಎ.ಗಳ ಅಧ್ಯಯನದ ಮೂಲಕ ಇನ್ನಿತರ ವಿಜ್ಞಾನಿಗಳು ಪ್ರಜ್ಞೆಯ ಸಂಶೋಧನೆಯಲ್ಲಿ ನಿರತರಾಗಿದ್ದಾರೆ. ಪ್ರಜ್ಞೆಯು ಟೆಲಿಪತಿಯನ್ನು ಹೋಲುವುದನ್ನು ಕೆಲವು ವಿಜ್ಞಾನಿಗಳು ಗಮನಿಸಿದ್ದಾರೆ. ಪ್ರಜ್ಞೆಯ ಅನ್ವೇಷಣೆಯಲ್ಲಿ ವಿಜ್ಞಾನಿಗಳಿಗೆ ಕ್ವಾಂಟಂ ಸಿದ್ಧಾಂತದ ಮೂಲಕ ಅನಾವರಣಗೊಂಡ ಎರಡು ಸತ್ಯಗಳು ತಮ್ಮ ಪ್ರಭಾವವನ್ನು ಬೀರಿವೆ. ಒಂದು ಹೈಸನ್‌ಬರ್ಗ್‌ನ ಅನಿಶ್ಚಿತಾ ತತ್ತ್ವವು ಮಾನವನ ಜ್ಞಾನದ ಮೇಲೆ ಹೇರಿದ ಮಿತಿ. ಇನ್ನೊಂದು, ಪರಮಾಣುವಿನ ಒಳಜಗತ್ತಿನ ವಸ್ತುಜ್ಞಾನವನ್ನು ಅರಿಯುವಲ್ಲಿ ಮಾನವನ ಪ್ರಜ್ಞೆಯು ವಹಿಸುವ ಪಾತ್ರ.

ತತ್ತ್ವಜ್ಞಾನಿಗಳ ಪ್ರಕಾರ, ಮೂಲಭೂತ ಪ್ರಜ್ಞೆಯು ಜೀವ, ಮನಸ್ಸು ಮತ್ತು ವ್ಯಷ್ಟಿಪ್ರಜ್ಞೆಯಾಗಿ ಪ್ರಕಟವಾಗುವುದರಿಂದ, ಅವೆಲ್ಲವೂ ಪರಸ್ಪರ ಸಂಬಂಧವನ್ನು ಹೊಂದಿದೆ. ಅನೇಕ ರಂಧ್ರಗಳಿರುವ ಮಣ್ಣಿನ ಮಡಕೆಯೊಂದರ ಒಳಗೆ ಉರಿಯುವ ದೀಪವಿದ್ದಾಗ, ವಿವಿಧ ರಂಧ್ರಗಳ ಮೂಲಕ ಬೆಳಕಿನ ಕಿರಣಗಳು ಹೊರಬರುವಂತೆ, ಅಂತರಂಗದಲ್ಲಿ ಜ್ಯೋತಿರೂಪದಲ್ಲಿರುವ ಪ್ರಜ್ಞೆಯು ಇಂದ್ರಿಯಗಳ ಮೂಲಕ ತನ್ನ ಬೆಳಕನ್ನು ಹೊರಚೆಲ್ಲುತ್ತದೆ ಎಂಬ ಶಂಕರಾಚಾರ್ಯರ ನಿದರ್ಶನ ಇಲ್ಲಿ ಪ್ರಸ್ತುತವಾಗುತ್ತದೆ. ಕೆಲವರ ಪ್ರಕಾರ, ಮೂಲಭೂತ ಪ್ರಜ್ಞೆಯು ಏನನ್ನೂ ಒಳಗೊಂಡಿರುವುದಿಲ್ಲ. ಆಳವಾದ ಚಿಂತನೆ, ಯೋಗ, ಧ್ಯಾನ, ವಿಪಶ್ಯನಗಳ ಮೂಲಕ ಮಾನವನು ತನ್ನ ಪ್ರಜ್ಞೆಯನ್ನು ಮೇಲ್ಮಟ್ಟಕ್ಕೆ ಏರಿಸಿಕೊಳ್ಳುವ ಸಾಧ್ಯತೆಯಿದೆ.

ಅನುಭಾವಿಗಳ ದೃಷ್ಟಿಯಿಂದ ನೋಡಿದಾಗ, ಪ್ರಜ್ಞೆಯು ಕೇವಲ ಅನುಭವ; ಅದನ್ನು ವಿವರಿಸುವುದು ಅಸಾಧ್ಯ. ತಾನು ಹೇಳುವುದು ಇತರರಿಗೆ ಅರ್ಥವಾಗದ್ದರಿಂದ, ಬೋಧಿವೃಕ್ಷದ ಕೆಳಗೆ ತಾನು ಪಡೆದ ದಿವ್ಯಪ್ರಜ್ಞೆಯನ್ನು ಕುರಿತು ಇತರರಿಗೆ ವಿವರಿಸುವುದಿಲ್ಲವೆಂದು ಗೌತಮ ಬುದ್ಧನು ನಿರ್ಧರಿಸಿದನು. ಆಗ ಪ್ರಜಾಪತಿಯು, ಉದಾಹರಣೆಗಳ ಮತ್ತು ಯಾವುದು ನಿಜವಾದ ಪ್ರಜ್ಞೆ ಅಲ್ಲವೆಂದು ಹೇಳುವುದರ ಮೂಲಕ ಉಪದೇಶವನ್ನು ನೀಡಬೇಕೆಂದು ವಿನಂತಿಸಿಕೊಳ್ಳುತ್ತಾನೆ. ಇದಕ್ಕೆ ಸಮ್ಮತಿಸಿದ ಬುದ್ಧ ಸಾರಾನಾಥಕ್ಕೆ ಹೋಗಿ, ತನ್ನ ಪ್ರಥಮ ಉಪನ್ಯಾಸವಾದ 'ಧರ್ಮಚಕ್ರ ಪರಿವರ್ತನ ಸೂತ್ರ' ವನ್ನು ನೀಡಿದ. ಇಡೀ ವಿಶ್ವವು ಪ್ರಜ್ಞೆಯ ಸಾಗರದಲ್ಲಿ ಮುಳುಗಿದೆ ಎಂಬುದನ್ನು ಸಾಕ್ಷಾತ್ಕಾರ ಮಾಡಿಕೊಂಡ ಶ್ರೀರಾಮಕೃಷ್ಣರು, ದಿವ್ಯಪ್ರಜ್ಞೆಯ ಅನುಭವವು ವ್ಯಕ್ತಿನಿಷ್ಠವಾದ್ದರಿಂದ ಅದನ್ನು ಮಾತಿನ ಮೂಲಕ ವಿವರಿಸುವುದು ಅಸಾಧ್ಯ ಎಂಬುದನ್ನು ಹೀಗೆ ತಿಳಿಸುತ್ತಾರೆ: "ಎಂದೂ ತುಪ್ಪದ ರುಚಿನೋಡದವನಿಗೆ ತುಪ್ಪದ ರುಚಿಯನ್ನು ಹೇಗೆ ವಿವರಿಸುವುದು ಸಾಧ್ಯ? ತುಪ್ಪದ ರುಚಿ ತುಪ್ಪದಂತೆ ಮಾತ್ರ ಇದೆ ಎಂದು ಹೇಳುವುದು ಮಾತ್ರ ಸಾಧ್ಯ."

ಭೌತಿಕ, ಜೈವಿಕ, ಮತ್ತು ಮಾನಸಿಕ ವಾಸ್ತವಿಕತೆಗಳನ್ನು ಒಟ್ಟು ಸೇರಿಸಿ ಮಾಡುವ ಸಮಗ್ರ ಅಧ್ಯಯನವು ಪ್ರಜ್ಞೆಯ ವಿವಿಧ ಸ್ತರಗಳ ವಿವರಗಳನ್ನು ನೀಡುವುದರಿಂದ, ವಿಜ್ಞಾನ ಮತ್ತು ತತ್ತ್ವಜ್ಞಾನಗಳ ಸಂಗಮವಾಗುತ್ತದೆ; ಆ ಮೂಲಕ ಮೂಲಭೂತ ಪ್ರಜ್ಞೆ ಹೆಚ್ಚು ಸ್ಪಷ್ಟವಾಗುವುದು ಎಂಬುದು ಒಂದು ವಾದ. ಆದರೆ, ಅಖಂಡ ಚೈತನ್ಯವು ಮಾನವನ ಸೀಮಿತ ಮನಸ್ಸಿಗೆ ಸಿಲುಕದು ಎನ್ನುವುದು ಇನ್ನೊಂದು ವಾದ. ಆದರೆ ಸೋಲನ್ನು ಒಪ್ಪಿಕೊಳ್ಳದ ವೈಚಾರಿಕ ಮನೋಭಾವದ ಮಾನವ ತನ್ನ ಗುರಿ ತಲಪುವ ತನಕ ಅನ್ವೇಷಣೆಯನ್ನು ಮುಂದುವರಿಸುವುದನ್ನು ಬಿಡುವುದಿಲ್ಲ. ಈ ಅನ್ವೇಷಣೆಯ ವಿವಿಧ ಪ್ರಕಾರಗಳನ್ನು ಗುರುತಿಸುವುದೇ ಈ ಪುಸ್ತಕದ ತಿರುಳು.

## SUBJECTIVITY IN SCIENCE- Interpretations of the Cartesian Project




**ಲೇಖಕರು:** ಕೃಷ್ಣಾ ರಾಯ್
**ಪ್ರಕಾಶಕರು:** ರಾಮಕೃಷ್ಣ ಮಿಷನ್ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್
**ಪುಟ:** ೨೪೩; **ಬೆಲೆ:** ರೂ.೧೦೦/-

ಮೊದಲು ವಿಜ್ಞಾನಿಯಾಗಿದ್ದು ಬಳಿಕ ತತ್ತ್ವಜ್ಞಾನಿಯಾದ ಫ್ರಾನ್ಸಿನ ರೆನೆ ಡೆಕಾರ್ಟ್ (೧೫೯೬-೧೬೫೦) ನಿರ್ವಚಿಸಿದ, ಮನಸ್ಸು ಮತ್ತು ಬಾಹ್ಯವಸ್ತುಗಳನ್ನು ಪ್ರತ್ಯೇಕವಾಗಿ ಬೇರ್ಪಡಿಸುವ ತತ್ತ್ವವು (Cogito, ergo sum -I think, therefore I am; ನಾನು ಆಲೋಚಿಸುತ್ತೇನೆ, ಹಾಗಾಗಿ ನಾನಿದ್ದೇನೆ), ಪಾಶ್ಚಾತ್ಯ ತತ್ತ್ವಜ್ಞಾನದ ಮೇಲೆ ಅಗಾಧ ಪ್ರಭಾವವನ್ನು ಬೀರಿದೆ. ನಮ್ಮ ಅಂತರಾತ್ಮದ ಕುರಿತು ನಾವು ತಿಳಿದಿರುವುದು ಹಾಗೂ ನಮ್ಮ